## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀಮತಿ ಶುಭ, ಉಪಾಧ್ಯಕ್ಷರು, ಶ್ರೀಮತಿ ಗೌರಮ್ಮ ಮತ್ತು ಶ್ರೀಮತಿ ಜ್ಯೋತಿ ಸದಸ್ಯರುಗಳು, ಮುತ್ತಾನಲ್ಲೂರು ಗ್ರಾಮ ಪಂಚಾಯಿತಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ. ಇವರುಗಳು ಮುತ್ತಾನಲ್ಲೂರು ಗ್ರಾಮ ಪಂಚಾಯಿತಿ ಕಛೇರಿಗೆ ಬೀಗ ಹಾಕಿ, ಸರ್ಕಾರಿ ಕೆಲಸಕ್ಕೆ ಅಡ್ಡಿಪಡಿಸಿರುವ ಹಿನ್ನೆಲೆಯಲ್ಲಿ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 43(ಎ) ರನ್ವಯ ಕ್ರಮ ಜರುಗಿಸುವ ಬಗ್ಗೆ.

ಓದಲಾಗಿದೆ:

1) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ ಬೆಂಗಳೂರು ನಗರ ಜಿಲ್ಲೆ ಇವರ ಪತ್ರ ಸಂಖ್ಯೆ:ಪರಿಷತ್:ಸಿಆರ್:72:2016-17, ದಿನಾಂಕ:04-06-2018.
2) ಸರ್ಕಾರದ ಸಮ ಸಂಖ್ಯೆಯ ಕಾರಣ ಕೇಳುವ ನೋಟಿಸ್ ದಿನಾಂಕ: 03.07.2018.
3) ಶ್ರೀಮತಿ ಶುಭ, ಉಪಾಧ್ಯಕ್ಷರು, ಶ್ರೀಮತಿ ಗೌರಮ್ಮ ಮತ್ತು ಶ್ರೀಮತಿ ಜ್ಯೋತಿ ಸದಸ್ಯರುಗಳು, ಮುತ್ತಾನಲ್ಲೂರು ಗ್ರಾಮ ಪಂಚಾಯಿತಿ, ಇವರ ಲಿಖಿತ ಹೇಳಿಕೆ ದಿನಾಂಕ:17-07-2018.
4) ಸರ್ಕಾರದ ಸಮ ಸಂಖ್ಯೆಯ ವಿಚಾರಣಾ ನೋಟೀಸ್, ದಿನಾಂಕ: 11.01.2019.

ಪ್ರಸ್ತಾವನೆ:

ಮೇಲೆ ಓದಲಾದ (1) ರಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ಬೆಂಗಳೂರು ನಗರ ಜಿಲ್ಲೆ ರವರ ದಿನಾಂಕ:04-06-2018ರ ಪತ್ರದಲ್ಲಿ ಮುತ್ತಾನಲ್ಲೂರು ಗ್ರಾಮ ಪಂಚಾಯಿತಿಯಲ್ಲಿ ದಿನಾಂಕ:03-02-2017ರಂದು ಗ್ರಾಮ ಪಂಚಾಯಿತಿ ಉಪಾಧ್ಯಕ್ಷರಾದ ಶ್ರೀಮತಿ ಶುಭ ಮತ್ತು ಅವರ ಪತಿಯವರಾದ ಶ್ರೀ ಶ್ರೀಧರ, ಸದಸ್ಯರಾದ ಶ್ರೀಮತಿ ಗೌರಮ್ಮ ಅವರ ಪತಿಯವರಾದ ಶ್ರೀ ಹರೀಶ ಹಾಗೂ ಶ್ರೀಮತಿ ಜ್ಯೋತಿ ಅವರ ಪತಿಯವರಾದ ವೆಂಕಟಸ್ವಾಮಿ ರೆಡ್ಡಿ ರವರು ಗ್ರಾಮ ಪಂಚಾಯಿತಿಗೆ ಬೀಗ ಹಾಕಿ ಗ್ರಾಮ ಪಂಚಾಯಿತಿ ಸಿಬ್ಬಂದಿಗಳಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಬಂಧನದಲ್ಲಿರಿಸಿ ಸರ್ಕಾರಿ ಕೆಲಸಕ್ಕೆ ಅಡ್ಡಿಪಡಿಸಿರುತ್ತಾರೆ. ಇವರ ವಿರುದ್ಧ ಕ್ರಮವಹಿಸಲು ಗ್ರಾಮ ಪಂಚಾಯಿತಿಯಲ್ಲಿ ದಿನಾಂಕ:28-02-2017ರಲ್ಲಿ ನಡವಳಿಕೆ ಮಾಡಿ ಮೇಲ್ಕಂಡ ಸದಸ್ಯರುಗಳ ವಿರುದ್ಧ ಕ್ರಮವಹಿಸಲು ಕಾರ್ಯನಿರ್ವಾಹಕ ಅಧಿಕಾರಿ, ಆನೇಕಲ್ ತಾಲ್ಲೂಕುರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಕಲಂ 43(ಎ) ರಡಿಯಲ್ಲಿ ಸದರಿಯವರ ಸದಸ್ಯತ್ವವನ್ನು ರದ್ದುಪಡಿಸಲು ಕೋರಿರುತ್ತಾರೆ.

ಮೇಲೆ ಓದಲಾದ (2)ರಲ್ಲಿ ಶ್ರೀಮತಿ ಶುಭ, ಉಪಾಧ್ಯಕ್ಷರು, ಶ್ರೀಮತಿ ಗೌರಮ್ಮ ಮತ್ತು ಶ್ರೀಮತಿ ಜ್ಯೋತಿ ಸದಸ್ಯರುಗಳು, ಮುತ್ತಾನಲ್ಲೂರು ಗ್ರಾಮ ಪಂಚಾಯಿತಿ, ಇವರಿಗೆ ಕಾರಣ ಕೇಳುವ ನೋಟೀಸು ಜಾರಿ ಮಾಡಿ ಇವರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ಸದರಿಯವರುಗಳ ಸಮಜಾಯಿಷಿಯನ್ನು ಕೇಳಲಾಗಿತ್ತು.

ಅದರಂತೆ ಮೇಲೆ ಓದಲಾದ (3)ರಲ್ಲಿ ಶ್ರೀಮತಿ ಶುಭ, ಉಪಾಧ್ಯಕ್ಷರು, ಶ್ರೀಮತಿ ಗೌರಮ್ಮ ಮತ್ತು ಶ್ರೀಮತಿ ಜ್ಯೋತಿ ಸದಸ್ಯರುಗಳು, ಮುತ್ತಾನಲ್ಲೂರು ಗ್ರಾಮ ಪಂಚಾಯಿತಿ ಇವರು "ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಶ್ರೀ ರಮೇಶ್ ರವರು ಗ್ರಾಮ ಪಂಚಾಯಿತಿಯಲ್ಲಿ ಕಾರ್ಯ ಭಾರವಹಿಸಿಕೊಂಡ ನಂತರ ಪಂಚಾಯಿತಿ ಅಧ್ಯಕ್ಷರಾದ ಶ್ರೀಮತಿ ಸುಜಾತ ವೈ ಚಿಕ್ಕಹಾಗಡೆ ರವರು ಮತ್ತು ಅಧಿಕಾರಿಗಳು ಸೇರಿಕೊಂಡು ಗ್ರಾಮ ಪಂಚಾಯಿತಿಯಲ್ಲಿ ಒಂದು

ಕೋಟಿಗೂ ಹೆಚ್ಚು ಮೌಲ್ಯದ ಅಕ್ರಮಗಳನ್ನು ಮಾಡಿದ್ದು, ಈ ಬಗ್ಗೆ ನಾನು ಮತ್ತು ನಮ್ಮ ಗ್ರಾಮ ಪಂಚಾಯಿತಿ ಸದಸ್ಯರು ಸಾಮಾನ್ಯ ಸಭೆಯಲ್ಲಿ ಅಕ್ಷೇಪಣೆ ಮಾಡಿದ್ದರೂ ಸಹ ಈ ವಿಚಾರವನ್ನು ಸಭಾ ನಡಾವಳಿಯಲ್ಲಿ ನಮೂದಿಸಿರುತ್ತಿರಲಿಲ್ಲ. ಪಂಚಾಯಿತಿಯಲ್ಲಿ ಸಂವಿಧಾನದ ಪ್ರಕಾರ ನಡೆಯಬೇಕಿದ್ದ ಜಮಾಬಂದಿಯನ್ನು ಎರಡು ವರ್ಷಗಳಿಂದ ನಡೆಸಿರುವುದಿಲ್ಲವೆಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ದೃಢೀಕರಿಸಿ ನೀಡಿರುತ್ತಾರೆ. ಎಲ್ಲಿ ತಮ್ಮ ಅಕ್ರಮಗಳು ಗೊತ್ತಾಗಿ ಬಿಡುತ್ತದೆ ಎಂಬ ಕಾರಣಕ್ಕಾಗಿ ಜಮಾಬಂಧಿಯನ್ನು ನಡೆಸಿರುವುದಿಲ್ಲ.

ಸದರಿ ಎಫ್.ಐ.ಆರ್ 03.02.2017 ಕಿಂತಲೂ ಮುಂಚೆಯೇ ಅಂದರೆ 02.02.2017 ರಲ್ಲಿಯೇ ನನ್ನ ಪತಿಯವರಾದ ಶ್ರೀ. ಶ್ರೀಧರ್ ರವರ ವಿರುದ್ಧ ಆರೋಪರಹಿತವಾಗಿ ಎಫ್.ಐ.ಆರ್ ದಾಖಲಿಸಿ ಜೈಲಿಗೆ ಕಳುಹಿಸುವುದಾಗಿ ಮತ್ತು ಜಾತಿ ನಿಂದನೆ ಕೇಸು ದಾಖಲಿಸುವುದಾಗಿ ಹೆದರಿಸಿ ನಾವು ಸಲ್ಲಿಸಿರುವ ಅರ್ಜಿಗಳನ್ನು ಹಿಂಪಡೆಯದಿದ್ದರೆ ನಿಮಗೆ ತಕ್ಕ ಪಾಠ ಕಲಿಸುವುದಾಗಿ ಬೆದರಿಕೆ ಹಾಕಿದ್ದಾರೆ.

ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ. ರಮೇಶ್ ರವರು ನಾನು ಪಿಡಿಓ ಸಂಘದ ಅಧ್ಯಕ್ಷ ನನ್ನ ನೀವು ಏನೂ ಮಾಡಲು ಸಾಧ್ಯವಿಲ್ಲ ಎಂದು ಧಮಕಿ ಹಾಕಿದ್ದಾರೆ. ಆ ಎಫ್.ಐ.ಆರ್ ನಲ್ಲಿ ಇರುವ ವಿಷಯಕ್ಕೂ ನನ್ನ ವಿರುದ್ಧ ಮಾಡಿರುವ ಆರೋಪಕ್ಕೂ ಸಂಬಂಧವೇ ಇಲ್ಲ. ನಮ್ಮ ಊರಿನಲ್ಲಿ ಅವರು ಮಾಡಿರುವ ಅಕ್ರಮಗಳನ್ನು ನನ್ನದೆಂದು ಆಧಾರ ರಹಿತವಾಗಿ ತೋರಿಸುತ್ತಾ ದುರುದ್ದೇಶ ಪೂರ್ವಕವಾಗಿ ನಮ್ಮ ಗಮನಕ್ಕೆ ಬಾರದೇ ಅವರಿಗೆ ಇಷ್ಟ ಬಂದ ರೀತಿ ಸಾಮಾನ್ಯ ಸಭೆ ಮುಗಿದ ನಂತರ ನಡಾವಳಿ ಬರೆದುಕೊಂಡಿರುತ್ತಾರೆ.

ದಿನಾಂಕ: 24.02.2016 ರಂದು ನಾನು ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಬೆಂಗಳೂರು ರವರಿಗೆ ಪಿಡಿಓ ಮತ್ತು ಅಧ್ಯಕ್ಷರ ಅಕ್ರಮಗಳ ಬಗ್ಗೆ ಕೂಲಂಕುಷವಾಗಿ ದೂರು ನೀಡಲಾಗಿತ್ತು. ಈ ಉದ್ದೇಶಕ್ಕಾಗಿ ನನ್ನ ಪತಿಯವರ ವಿರುದ್ದ ಆಧಾರ ರಹಿತ ಎಫ್.ಐ.ಆರ್ ದಾಖಲಿಸಿ ನನ್ನನ್ನು ಹೆದರಿಸುವ ಕೆಲಸ ಮಾಡಿರುತ್ತಾರೆ.

ಉಳಿದಂತೆ 28.02.2017 ರಂದು ನಡೆದ ಸಾಮಾನ್ಯ ಸಭೆಯಲ್ಲಿ ಸದಸ್ಯರ ದುರ್ನಡತೆ ಬಗ್ಗೆ ಎಂದು ಅಜೆಂಡಾದಲ್ಲಿ ಇರುವುದನ್ನು ನಾನು ಪ್ರಶ್ನಿಸಿದಾಗ ಸದಸ್ಯರೆಂದರೆ ಪಂಚಾಯಿತಿಗೆ ಅರ್ಜಿ/ಆರ್ ಟಿ ಐ ನೀಡುವ ಹಾಗಿಲ್ಲ ಆ ವಿಷಯ ಚರ್ಚೆ ಬೇಡ ಎಂದು ತಿಳಿಸಿದರು.

ಸಭಾ ನಡಾವಳಿಯನ್ನು ಕಾನೂನು ಪ್ರಕಾರ ಸಭೆಯಲ್ಲಿ ಬರೆಯುವುದಿಲ್ಲ. ಈ ಬಗ್ಗೆ ಸಾಕಷ್ಟು ದೂರು ನೀಡಲಾರದು ಅಂದು ಸಹ ನಡಾವಳಿಯನ್ನು ಬರೆಯಲಿಲ್ಲ. ಸಭೆ ಮುಗಿದ ನಂತರದ ದಿನಗಳಲ್ಲಿ ತಮಗಿಷ್ಟಬಂದಂತೆ ಆಧಾರ ರಹಿತ ಆರೋಪ ಮಾಡಿ ಬರೆಯಲಾಗಿದೆ.

ಅವರು ಮಾಡಿರುವ ಆರೋಪ ಸಂಪೂರ್ಣ ದುರುದ್ದೇಶದಿಂದ ಕೂಡಿದ್ದು ಪಿಡಿಓ ರಮೇಶ್ ಮತ್ತು ಗ್ರಾಮಪಂಚಾಯಿತಿ ಅಧ್ಯಕ್ಷರಾದ ಶ್ರೀಮತಿ. ಸುಜಾತ ವೈ ಚೆಕ್ಕ ಹಾಗಡೆ ರವರು ಉದ್ದೇಶ ಪೂರಕವಾಗಿ ಈ ಆರೋಪ ಮಾಡಿದ್ದಾರೆ. ಆ ದಿನ ಇತರೆ ಸಿಬ್ಬಂದಿಯಾದ ಎಸ್‌ಡಿಎ, ಇಬ್ಬರು ಕರವಸೂಲಿಗಾರರು, ಒಬ್ಬರು ಗಣಕಯಂತ್ರ ನಿರ್ವಾಹಕರು ಸಹ ಇದ್ದರೂ ಅವರು ಯಾವುದೇ ದೂರನ್ನು ನೀಡದಿರುವುದನ್ನು ಗಮನಿಸಿದರೆ ಪಡಿಓ ಮತ್ತು ಅಧ್ಯಕ್ಷರ ಹುನ್ನಾರ ತಿಳಿಯುತ್ತದೆ. ಹಾಗಾಗಿ ಈ ಆರೋಪ ಸುಳ್ಳು ಮತ್ತು ನಿರಾಧಾರ.

ಮೇಲೆ ಓದಲಾದ (4) ರನ್ವಯ ಶ್ರೀಮತಿ ಶುಭ, ಉಪಾಧ್ಯಕ್ಷರು, ಶ್ರೀಮತಿ ಗೌರಮ್ಮ ಮತ್ತು ಶ್ರೀಮತಿ ಜ್ಯೋತಿ ಸದಸ್ಯರುಗಳು, ಮುತ್ತಾನಲ್ಲೂರು ಗ್ರಾಮ ಪಂಚಾಯಿತಿ. ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ. ಇವರನ್ನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾನ್ಯ ಪ್ರಧಾನ ಕಾರ್ಯದರ್ಶಿ (ಪಂ.ರಾಜ್) ರವರ ನ್ಯಾಯಾಲಯದಲ್ಲಿ ದಿನಾಂಕ:16.01.2019 ರಂದು ಜರುಗಿದ ವಿಚಾರಣೆಯಲ್ಲಿ ಶ್ರೀ ಮಹೇಶ್ ಕುಮಾರ್ ವಿ., ಸಹಾಯಕ ನಿರ್ದೇಶಕರು, ಆನೇಕಲ್ ತಾಲ್ಲೂಕು ಪಂಚಾಯಿತಿ, ಸದರಿ ಪ್ರಕರಣ ನಡೆದ ಅವಧಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾದ ಶ್ರೀ

ರಮೇಶ್ ಹಾಗೂ ಶ್ರೀ ಶ್ರೀನಿವಾಸಯ್ಯ, ಕಾರ್ಯದರ್ಶಿ, ಮುತ್ತಾನಲ್ಲೂರು ಗ್ರಾಮ ಪಂಚಾಯಿತಿ, ದೂರುದಾರರ ಪರವಾಗಿ ಶ್ರೀಮತಿ ವೈ. ಸುಜಾತ ಮಾಜಿ ಅಧ್ಯಕ್ಷರು, ಮುತ್ತಾನಲ್ಲೂರು ಗ್ರಾಮ ಪಂಚಾಯಿತಿ ಹಾಗೂ ಆಪಾದಿತ ಸದಸ್ಯರು ಹಾಜರಿರುತ್ತಾರೆ.

ಪ್ರಕರಣ ನಡೆದ ಅವಧಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅಂದಿನ ಪಿ.ಡಿ.ಒ. ಶ್ರೀ ರಮೇಶ್ ಹಾಜರಿದ್ದು, ಉಪಾಧ್ಯಕ್ಷರ ಗಂಡ ಶ್ರೀಧರ್ ರವರು ನನಗೆ ನಿಂದಿಸಿ ತೊಂದರೆ ಕೊಟ್ಟಿರುತ್ತಾರೆ ಎಂದು ಹೇಳಿಕೆ ನೀಡಿರುತ್ತಾರೆ.

ಸರ್ಕಾರವು ಈ ಪ್ರಕರಣದಲ್ಲಿ ಲಭ್ಯವಿರುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಲಾಗಿದ್ದು, ಮುತ್ತಾನಲ್ಲೂರು ಗ್ರಾಮ ಪಂಚಾಯಿತಿಯ ಉಪಾಧ್ಯಕ್ಷರಾದ ಶ್ರೀಮತಿ ಶುಭಾ ಹಾಗೂ ಸದಸ್ಯರುಗಳಾದ ಶ್ರೀಮತಿ ಗೌರಮ್ಮ ಮತ್ತು ಶ್ರೀಮತಿ ಜ್ಯೋತಿ ಇವರುಗಳ ವಿರುದ್ಧದ ದುರ್ನಡತೆಯ ಆರೋಪವು ಸಾಬೀತಾಗಿರುವ ಹಿನ್ನೆಲೆಯಲ್ಲಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ)(1) ರಡಿಯಲ್ಲಿ ಸದರಿಯವರುಗಳ ಸದಸ್ಯತ್ವವನ್ನು ರದ್ದುಪಡಿಸಲು ಸರ್ಕಾರವು ನಿರ್ಣಯಿಸಿದೆ.

ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 554 ಗ್ರಾಪಂಅ 2018 ಬೆಂಗಳೂರು, ದಿನಾಂಕ:04-07-2019.**

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಶ್ರೀಮತಿ ಶುಭಾ, ಉಪಾಧ್ಯಕ್ಷರು, ಹಾಗೂ ಸದಸ್ಯರುಗಳಾದ ಶ್ರೀಮತಿ ಗೌರಮ್ಮ ಮತ್ತು ಶ್ರೀಮತಿ ಜ್ಯೋತಿ ಮುತ್ತಾನಲ್ಲೂರು ಗ್ರಾಮ ಪಂಚಾಯಿತಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ ಇವರುಗಳ ವಿರುದ್ಧದ ದುರ್ನಡತೆಯ ಆರೋಪವು ಸಾಬೀತಾಗಿರುವ ಹಿನ್ನೆಲೆಯಲ್ಲಿ, ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಕಲಂ 43(ಎ)(1) ರನ್ವಯ ಮುತ್ತಾನಲ್ಲೂರು ಗ್ರಾಮ ಪಂಚಾಯಿತಿಯ ಸದಸ್ಯತ್ವ ಸ್ಥಾನದಿಂದ ತೆಗೆದು ಹಾಕಿ ತಕ್ಷಣದಿಂದ ಜಾರಿಗೆ ಬರುವಂತೆ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

4/7
(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪ್ರತಿ:

1) ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೆಂಗಳೂರು ನಗರ ಜಿಲ್ಲೆ.
3) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ.
4) ಶ್ರೀಮತಿ ಶುಭ, ಉಪಾಧ್ಯಕ್ಷರು, ಮುತ್ತಾನಲ್ಲೂರು ಗ್ರಾಮ ಪಂಚಾಯಿತಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ.
5) ಶ್ರೀಮತಿ ಗೌರಮ್ಮ ಸದಸ್ಯರು, ಮುತ್ತಾನಲ್ಲೂರು ಗ್ರಾಮ ಪಂಚಾಯಿತಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ.

6) ಶ್ರೀಮತಿ ಜ್ಯೋತಿ ಸದಸ್ಯರು, ಮುತ್ತಾನಲ್ಲೂರು ಗ್ರಾಮ ಪಂಚಾಯಿತಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ.
7) ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಮುತ್ತಾನಲ್ಲೂರು ಗ್ರಾಮ ಪಂಚಾಯಿತಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ.
8) ಕಛೇರಿ ಪ್ರತಿ/ಹೆಚ್ಚುವರಿ ಪ್ರತಿ.
9) ಗಣಕ ಕೋಶ.

ಪ್ರತಿಯನ್ನು ಮಾಹಿತಿಗಾಗಿ:

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.